ಮಾಡಬೇಕೇ ಅಥವಾ ಸೊಸೈಟಿಯ ಮೂಲಕವೇ ರನ್ ಮಾಡಬೇಕೇ ಎಂದು ಅಭಿಪ್ರಾಯವನ್ನು ಕೇಳಲಿಕ್ಕೆ ಬಂದಿದ್ದಾರೆ. ಸರ್ಕಾರ ಪುನಃ ತನ್ನ ತೀರ್ಮಾನವನ್ನು ಬದಲಾಯಿಸಿದೆಯೇ? ಪುನಃ ಆಕ್ಷನ್ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಧರ್ಮಸಿಂಗ್:- ಎಕ್ಸೈಜ್ ಸ್ಥಳದಲ್ಲಿರತಕ್ಕಂಥ ಅಧಿಕಾರಿಗಳು ಜ್ಯೂರಿಸ್‌ಡಿಕ್ಷನ್ ಬಗ್ಗೆ ಮೂರ್ತೆದಾರರ ಸಂಘ ಮಾಡುವಲ್ಲಿ ಎಲ್ಲೆಲ್ಲಿ ಇಂತಹ ತೊಂದರೆ ಇದೆ, ಏನೇನಾಗಿದೆ ಎನ್ನತಕ್ಕಂಥಾದ್ದರ ಬಗ್ಗೆ ಬಂದಿರಬಹುದು. ಈ ಬಗ್ಗೆ ಈಗಾಗಲೇ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಅದರ ಬಗ್ಗೆ ಮತ್ತೆ ಬೇರೆ ಆಕ್ಷನ್ ಮಾಡತಕ್ಕಂಥಾದ್ದು ಏನೂ ಇಲ್ಲ. ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಅದು ಆಗತಕ್ಕದ್ದು.

ಶ್ರೀ ಕೆ. ಗಂಗಾಧರಗೌಡ:- ಸನ್ಮಾನ್ಯ ಅಧ್ಯಕ್ಷರೆ, ಎರಡು ವರ್ಷಗಳಿಂದ ಈ ಸಂಬಂಧ ಮಾರಾಟದ ಬಗ್ಗೆ ಸರ್ಕಾರಕ್ಕೆ ಒಂದು ಸ್ಪಷ್ಟವಾದಂಥ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ವರ್ಷಕ್ಕೆ ಸುಮಾರು 4-5 ಕೋಟಿ ರೂಪಾಯಿಗಳ ಹಣ ಸರ್ಕಾರಕ್ಕೆ ಏನು ಬರುವುದಿದೆ, ಅದು ಇವೊತ್ತು ಮಧ್ಯವರ್ತಿಗಳಿಗೆ ಸಿಗುತ್ತಿದೆ. ಎರಡು ವರ್ಷಗಳಿಂದ ಸರ್ಕಾರಕ್ಕೆ ಈ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ಏನೂ ಆಗಿಲ್ಲ. ನಿಮ್ಮ ಅಬ್ಕಾರಿ ನೀತಿ ಏನು ಎನ್ನತಕ್ಕಂಥಾದ್ದನ್ನು ಸ್ಪಷ್ಟಗೊಳಿಸಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಾಜು ಮುಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೊಸೈಟಿ ಮಾಡಿದ್ದಾರೆ. ಗುಲ್ಬರ್ಗ ಮತ್ತು ರಾಯಚೂರು ವಿಭಾಗಗಳಲ್ಲಿ ಹರಾಜು ಮಾಡುತ್ತಿದ್ದಾರೆ. ಈ ರೀತಿ ಹಣ ಪೋಲಾಗುವುದನ್ನು ನೀವು ಯಾವ ರೀತಿ ತಡೆಗಟ್ಟುತ್ತೀರಿ? ಇನ್ನು ಎರಡು ಮೂರು ವರ್ಷಗಳ ನಂತರ ನಮ್ಮ ಸದಸ್ಯತ್ವದ ಅವಧಿ ಮುಗಿದುಹೋಗುತ್ತದೆ. ಆದುದರಿಂದ, ಇದಕ್ಕೆ ತಾವು ಏನು ವ್ಯವಸ್ಥೆ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್:- ಈಗಾಗಲೇ ಸರ್ಕಾರ ಕ್ರಮ ತೆಗೆದುಕೊಂಡ ನಂತರ, ಸರ್ಕಾರಕ್ಕೆ ಎಷ್ಟು ವರಮಾನ ಬರಬೇಕಾಗಿತ್ತು, ಅಷ್ಟು ಬರಬೇಕು, ಆ ಹಣವನ್ನು ಸೊಸೈಟಿ ಮುಖಾಂತರ ಕೊಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಬೇರೆ ಕಡೆ ಹರಾಜು ಮಾಡತಕ್ಕಂಥಾದ್ದು ಪ್ರತ್ಯೇಕ ಪ್ರಶ್ನೆಯಾಗಿರುವುದರಿಂದ, ನೀವು ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಮಲ್ಲೇಶ್ವರ ವೃತ್ತದಿಂದ ರಾಜಾಜಿನಗರದವರೆಗೆ ಇರುವ ಜನದಟ್ಟಣೆಯನ್ನು ತಡೆಗಟ್ಟುವುದು.

103(41) ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲ್ಲೇಶ್ವರ ವೃತ್ತದಿಂದ ರಾಜಾಜಿನಗರದ ನವರಂಗ್ ಚಿತ್ರಮಂದಿರದವರೆಗೂ ಹೆಚ್ಚಿನ ಜನಸಂದಣಿಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಈ ಜನದಟ್ಟಣೆಯನ್ನು ಹಾಗೂ ವಾಹನ ಸಂಚಾರವನ್ನು ತಡೆಗಟ್ಟಲು ಫ್ಲೈ ಓವರ್‌ಗಳನ್ನು ನಿರ್ಮಿಸುವ ಆಲೋಚನೆಯಿದೆಯೇ;

ಇ) ಇದ್ದಲ್ಲಿ, ಎಂದಿನಿಂದ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) -ಹೌದು-

ಆ) -ಇಲ್ಲ-

ಇ) -ಉದ್ಭವಿಸುವುದಿಲ್ಲ-

ಶ್ರೀ ಕೆ. ಲಕ್ಷ್ಮಣ್:- ಸನ್ಮಾನ್ಯ ಅಧ್ಯಕ್ಷರೆ, ಮಲ್ಲೇಶ್ವರಂ ವೃತ್ತದಿಂದ ರಾಜಾಜಿನಗರದ ನವರಂಗ್ ಚಿತ್ರಮಂದಿರದ ವರೆಗೂ ಜನಸಂದಣಿಯ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಬಂದಿದೆಯೆಂದು

ಉತ್ತರ ಕೊಟ್ಟಿದ್ದಾರೆ. ಅದರ ಪರಿಹಾರಕ್ಕೋಸ್ಕರ ಏನು ಮಾಡಿದ್ದೀರಿ ಎಂದು ಕೇಳಿದ್ದಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ದಿನೇ ದಿನೇ ಜನಸಂಖ್ಯೆ ಮತ್ತು ವಾಹನಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಅದರ ಬಗ್ಗೆ ಬೇರೆ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಮುಂದೆ ತುಂಬಾ ಅನಾನುಕೂಲವಾಗುತ್ತದೆ. ಅಲ್ಲದೆ, ಅಪಘಾತವಾಗಿ ಮರಣ ಸಂಭವಿಸುವ ಸಂದರ್ಭವಿರುತ್ತದೆ. ಆದಷ್ಟು ಬೇಗ ಫ್ಲೈ ಓವರ್ ಮತ್ತು ಸಬ್-ವೇಗಳನ್ನು ನಿರ್ಮಾಣ ಮಾಡದೆ ಹೋದರೆ ತುಂಬಾ ಅಪಾಯಕಾರಿ ಸನ್ನಿವೇಶ ಉಂಟಾಗುತ್ತದೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಜೆ. ಜಾರ್ಜ್:- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೆಂಗಳೂರು ನಗರ ಬಹಳ ಬೃಹದಾಕಾರವಾಗಿ ಬೆಳೆಯುತ್ತಿದೆ. ಈ ವಿಚಾರದಲ್ಲಿ ಈಗಾಗಲೇ ಬೆಂಗಳೂರು ನಗರ ಕಾರ್ಪೊರೇಷನ್‌ರವರು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇದರಲ್ಲಿ ರೈಲ್ವೆ ಸ್ಟೇಷನ್ ಮುಂದೆ ಒಂದು ಸಬ್-ವೇಯನ್ನು ಮತ್ತು ಕೆಂಪೇಗೌಡ ರಸ್ತೆಗೆ ಸಬ್-ವೇಯನ್ನು ಪ್ರಾರಂಭ ಮಾಡಲಾಗಿದೆ. ಈಗ ಕಾರ್ಪೊರೇಷನ್ ಮುಂದೆ ಮತ್ತು ಮೈಸೂರು ರಸ್ತೆ ಪಕ್ಕದಲ್ಲಿ ಎರಡು ಫ್ಲೈ ಓವರ್‌ಗಳನ್ನು ನಿರ್ಮಿಸಲು 100 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಪ್ರಸ್ತುತ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಆದಷ್ಟು ಬೇಗ ನಿರ್ಮಾಣದ ಕೆಲಸ ತೆಗೆದುಕೊಳ್ಳುತ್ತೇವೆ. ನಂತರ ಮಿನರ್ವ ಚಿತ್ರಮಂದಿರದ ಪಕ್ಕದಲ್ಲಿ 5 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪಾದಚಾರಿಗಳಿಗೆ ಒಂದು ವ್ಯವಸ್ಥೆ ಮಾಡುತ್ತಿದ್ದೇವೆ. ಆದಷ್ಟು ಶೀಘ್ರವಾಗಿ ಒಂದೊಂದೇ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಲಕ್ಷ್ಮಣ:- ಮಾನ್ಯ ಅಧ್ಯಕ್ಷರೆ, ಮಲ್ಲೇಶ್ವರಂ ವೃತ್ತದಿಂದ ರಾಜಾಜಿನಗರದ ನವರಂಗ್ ವೃತ್ತದವರೆಗೆ ಫ್ಲೈ ಓವರ್ ಆಗಲಿ, ಸಬ್-ವೇ ಆಗಲಿ ಮಾಡಲೇಬೇಕಾಗಿದೆ. ಏಕೆಂದರೆ, ಈ ಪ್ರದೇಶ ಬೆಂಗಳೂರು ಸಿಟಿಯ ಮಧ್ಯೆ ಇರುವುದರಿಂದ ವಾಹನಗಳ ಮತ್ತು ಜನಸಂಖ್ಯೆಯ ಒತ್ತಡ ಬಹಳ ಹೆಚ್ಚಾಗಿದೆ.

ಶ್ರೀ ಕೆ.ಜೆ. ಜಾರ್ಜ್:- ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಆದಷ್ಟು ಬೇಗ ಈ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆ.

104(872). ಶ್ರೀ ಹೆಚ್.ಎಸ್. ಪಾಟೀಲ್ (ಸುಫ್ತಗಿ):- ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ? ಅಂದಿನಿಂದ 31-1-1992 ರವರೆಗೂ ಪ್ರತಿವರ್ಷ ಖರ್ಚು ಮಾಡಲಾಗಿರುವ ಜಿಲ್ಲಾವಾರು ಮತ್ತು ಇಲಾಖಾವಾರು ಹಣವೆಷ್ಟು?

ಆ) ಗುಲ್ಬರ್ಗ ಕಂದಾಯ ವಿಭಾಗದ ಎಲ್ಲಾ ಜಿಲ್ಲೆಗಳಿಗೂ ಈ ಅಭಿವೃದ್ಧಿ ಅನುದಾನ ಸರಿಯಾಗಿ ನೀಡಿಕೆಯಾಗಿಲ್ಲ ಎಂಬ ಮಾತು ನಿಜವೇ? ಹಾಗಿದ್ದಲ್ಲಿ, ಹಣ ನೀಡಿಕೆಯ ತಾರತಮ್ಯಕ್ಕೆ ಕಾರಣಗಳೇನು? ಸ್ಪಷ್ಟಪಡಿಸುವುದು.

ಇ) ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ರಾಯಚೂರು ಜಿಲ್ಲೆಯ ತಾಲ್ಲೂಕುಗಳು ಯಾವ ವರ್ಷಗಳಲ್ಲಿ ಯಾವ ಇಲಾಖೆಗಳ ಮತ್ತು ಯಾವ ಉದ್ದೇಶಗಳಿಗೆ 31-1-92 ರವರೆಗೂ ಉಪಯೋಗಿಸಿಕೊಂಡಿರುವ ಹಣವೆಷ್ಟು? ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಈ) ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿಯೋಜನೆ ಸಲುವಾಗಿ ಕೇಂದ್ರ ಸರಕಾರ ವಿಶೇಷ ಅನುದಾನ ನೀಡಲು ಯೋಜನಾ ಆಯೋಜನಾ ಆಯೋಗ ಶಿಫಾರಸ್ಸು ಮಾಡಿದೆಯೇ? ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಉ) ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿಯೋಜನೆ ಅನುಷ್ಠಾನ ಮಂಡಳಿ ಸ್ವಾಯತ ಮಂಡಳಿಯಾಗಿ ರಚಿತಗೊಂಡಿದೆಯೇ? ಹಾಗಿದ್ದಲ್ಲಿ ಸದಸ್ಯರ ಮತ್ತು ಅಧ್ಯಕ್ಷರ ನಾಮಕರಣ ಸರಕಾರ ಮಾಡಿದೆಯೇ ವಿಳಂಬಕ್ಕೆ ಕಾರಣಗಳೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ವೆಚ್ಚಗಳು ಮತ್ತು ಸಾಂಖ್ಯಿಕ ಸಚಿವರು.):-